

ಅದೇ ನೋವಿನಲ್ಲಿ ಕೆಲವು ವರ್ಷಗಳು ಕಳೆಯುತ್ತವೆ. ಅಷ್ಟರಲ್ಲಿ ಅವರ ಮುಖ ಭಾವವೇ ಬದಲಾಗಿಹೋಗಿರುತ್ತದೆ. ಆಕರ್ಷಕವಾಗಿದ್ದ ಅವರ ಮುಖ ಅನಾಕರ್ಷಕವಾಗಿಬಿಟ್ಟಿರುತ್ತದೆ. ಕಣ್ಣುಗಳಲ್ಲಿ ಗಾಬರಿ ಕಾಣಿಸುತ್ತದೆ. ಅಂತರಂಗದಲ್ಲಿ ಅವರಿಗೆ ದಿಗಿಲು, ಆತಂಕ ತುಂಬಿರುತ್ತದೆ. ಅಂತಹ ವ್ಯಕ್ತಿಗಳು ಬದುಕಿನ ಭವ್ಯತೆಯನ್ನು, ಬದುಕಿನ ಮಹತ್ವವನ್ನು ಮರೆತಿರುತ್ತಾರೆ. ತಮ್ಮ ಕ್ರಿಯಾಶೀಲತೆಯನ್ನು ಕಳೆದುಕೊಳ್ಳುತ್ತಾರೆ. ಜೀವನೋತ್ಸಾಹವನ್ನು ಕಳೆದುಕೊಂಡು ದಿನದಿಂದ ದಿನಕ್ಕೆ ಬರಡಾಗುತ್ತಿರುವ ಸೋರೆಕಾಯಿಯಂತೆ ಆಗುತ್ತಾರೆ. ಬದುಕಿನಲ್ಲಿ ಅರ್ಥವೇ ಇಲ್ಲ ಅಂತಲೂ ಸಾಯುವುದೇ ಒಳ್ಳೆಯದು ಅಂತಲೂ ಹೇಳಲಿಕ್ಕೆ ಶುರುಮಾಡುತ್ತಾರೆ.

ಇಂತಹ ಲಕ್ಷಣಗಳನ್ನು ನಿಮ್ಮವರಲ್ಲಿ ಗುರುತಿಸಿಕೊಂಡರೆ, ಅದು ಪೂರ್ವಾರ್ಧದಲ್ಲಿ ಪುಣ್ಯದ ಕೆಲಸ. ಉಳಿದರ್ಧಕ್ಕಾಗಿ, ಆದಷ್ಟು ಬೇಗನೇ ಸೂಕ್ತ ಮನೋಚಿಕಿತ್ಸಕರನ್ನು ಅಥವಾ ಸಂಮೋಹಿನಿ ತಜ್ಞರನ್ನು ಸಂಪರ್ಕಿಸಬೇಕು. ಅವರ ಮಾರ್ಗದರ್ಶನದಲ್ಲಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು. ಮತ್ತೂ ಮುಖ್ಯವಾಗಿ ಇಂತಹವರಿಗೆ ಪ್ರೀತಿಯ ಆವಶ್ಯಕತೆ ಇರುತ್ತದೆ. ಅಂದರೆ, ಚಿಕಿತ್ಸೆಯ ಜೊತೆಗೆ ನೀವು ಪ್ರೀತಿಯನ್ನೂ, ಕಾಳಜಿಯನ್ನೂ ತೋರಿಸಿದರೆ ತಮ್ಮ ಸಮಸ್ಯೆಯಿಂದ ಬಹುಬೇಗ ಗುಣಮುಖರಾಗುತ್ತಾರೆ. ನಿಮ್ಮ ಪ್ರೀತಿ ಅಥವಾ ಕಾಳಜಿ ನಟನೆಯಾಗಿರಬಾರದು. ನಿಮ್ಮ ಪ್ರೀತಿ ಪ್ರಾಮಾಣಿಕವಾಗಿರಬೇಕು. ನಿಮ್ಮ ಪ್ರೀತಿಯ ಆಸರೆ ಸಿಗದಿರುವ ಕಾರಣದಿಂದಲೇ ಇಂತಹವರು ಅನಾರೋಗ್ಯದ ಆಸರೆಯನ್ನು ಪಡೆದುಕೊಂಡಿರುತ್ತಾರೆ. ಅಥವಾ ತನಗೆ ಸಂಬಂಧಪಟ್ಟವರಿಂದ ಸರಿಯಾದ ಕಾಳಜಿ ಹಾಗೂ ಪ್ರಾಮಾಣಿಕವಾದ ಪ್ರೀತಿ ಸಿಗುತ್ತಿಲ್ಲ ಅಂತ ಅವರು ನಂಬಿಕೊಂಡಿರುತ್ತಾರೆ. ಇಂತಹ ಸಮಸ್ಯೆಯನ್ನು ಎಷ್ಟು ಬೇಗ ಗುರುತಿಸಿ, ಸೂಕ್ತ ಆರೈಕೆ ಮಾಡಲಿಕ್ಕೆ ಸಾಧ್ಯವೋ, ಅಷ್ಟು ಬೇಗ ಅವರು ಸುಧಾರಿಸುತ್ತಾರೆ. ತಮ್ಮ ಜೀವನದ ಆನಂದವನ್ನು ಅನುಭವಿಸಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲದೇ ಅವರ ಜೊತೆಗೆ ಇರುವವರಿಗೂ ಸಂತೋಷಪಡಲಿಕ್ಕೆ ಸಾಧ್ಯವಾಗುತ್ತದೆ.

ನಿಮ್ಮನ್ನು ನೀವು ಸಮಾಧಾನದಿಂದ ಇರಿಸಿಕೊಳ್ಳುವುದರಿಂದ ಹಾಗೂ ಯಾವುದೇ ಸನ್ನಿವೇಶ ಅಥವಾ ಸಂದರ್ಭಗಳಲ್ಲಿಯೂ ಸಹ ನಿಮ್ಮನ್ನು ನೀವು ಸಮಚಿತ್ತದಿಂದ ಇರಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳುವುದರಿಂದ ಅಥವಾ ನಿತ್ಯವೂ ಧ್ಯಾನವನ್ನು ಮಾಡುವುದರಿಂದ ಇಂತಹ ಸಮಸ್ಯೆಗಳಿಂದ ಬಚಾವಾಗಲಿಕ್ಕೆ ಸಾಧ್ಯ. ಆರೋಗ್ಯದ ಆಸರೆಯನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯ! ❁

## ಶ್ರೀಮಾತೆಯವರ ಉಪದೇಶಗಳು



❁ ಎಂತಹ ಮಹಾಪುರುಷನೇ ಆಗಿರಲಿ, ದೇಹ ಧಾರಣೆ ಮಾಡಿದನೆಂದರೆ ದೇಹದ ಕರ್ಮ ಸವೆಸಲೇಬೇಕು. ಆದರೆ ವ್ಯತ್ಯಾಸವೇನೆಂದರೆ, ಸಾಮಾನ್ಯ ಜನ ಅಳುತ್ತಾ ದೇಹ ಬಿಡುತ್ತಾರೆ. ಮಹಾವ್ಯಕ್ತಿಗಳಾದರೆ ನಗುತ್ತಾ ದೇಹ ಬಿಡುತ್ತಾರೆ. ಅವರಿಗೆ ಮೃತ್ಯುವೆಂದರೆ ಒಂದು ಆಟ!

❁ ಮನಸ್ಸಿನಲ್ಲಿ ನೀನು ಹೀಗೆ ಭಾವಿಸಿಕೊ: ಬೇರೆ ಯಾರೂ ಇಲ್ಲದಿದ್ದರೂ ನನಗೊಬ್ಬಳು 'ತಾಯಿ' ಇದ್ದಾಳೆ ಅಂತ. ಶ್ರೀರಾಮಕೃಷ್ಣರು ಹೇಳಿದಂತೆ, ಇಲ್ಲಿಗೆ ಬಂದವರಿಗೆಲ್ಲ ಅವರು ಅಂತ್ಯದಲ್ಲಾದರೂ ದರ್ಶನ ಕೊಟ್ಟೇ ಕೊಡುತ್ತಾರೆ ಅಂತ ಭಾವಿಸಿಕೊ.

❁ **ಪ್ರಶ್ನೆ:** ಸಂಸಾರದಲ್ಲಿ ಪತ್ನಿಯಾದವಳಿಗೆ ಗಂಡನೇ ಪೂಜ್ಯ ವ್ಯಕ್ತಿ ಹಾಗೂ ಗುರು. ಅವನ ಸೇವೆಯಿಂದಲೇ ಸಾಲೋಕ್ಯ ಸಾಯುಜ್ಯ ಎಲ್ಲವೂ ದೊರಕುವುದು ಎಂದು ಶಾಸ್ತ್ರ ಹೇಳುತ್ತದೆ. ಅವನ ಇಚ್ಛೆಗೆ ವಿರುದ್ಧವಾಗಿ ಯಾವಳಾದರೂ ಸಂಯಮ ಇತ್ಯಾದಿ ಸಾಧನೆಗಳ ಮೂಲಕ ಆಧ್ಯಾತ್ಮಿಕ ಉನ್ನತಿಗೆ ಪ್ರಯತ್ನಿಸಿದರೆ ಅದರಿಂದ ಪಾಪವುಂಟಾಗುವುದೆ?

**ಶ್ರೀಮಾತೆ:** ಭಗವಂತನಿಗಾಗಿ ಅಂತಹದನ್ನೇನಾದರೂ ಮಾಡಿದರೆ ಅದರಿಂದ ಪಾಪವುಂಟಾಗದು. ಯಾಕಾದರೂ ಆಗಬೇಕು? ಇಂದ್ರಿಯ ಸಂಯಮವಿರಬೇಕು. ವಿಧವೆಯರಿಗೆ ಕಟ್ಟುನಿಟ್ಟಿನ ನಿಯಮಗಳಿರುವುದು ಇಂದ್ರಿಯ ನಿಗ್ರಹಕ್ಕೋಸ್ಕರವೆ.

❁ ಎಂಥಾ ಸೌಭಾಗ್ಯದಿಂದ ಈ ಜನ್ಮ ದೊರಕಿದೆ ಗೊತ್ತೆ? ಆದ್ದರಿಂದ ಚೆನ್ನಾಗಿ ಭಗವಂತನನ್ನು ಪ್ರಾರ್ಥಿಸಬೇಕು. ಕಠಿಣ ಶ್ರಮ ಪಡಬೇಕು. ಇಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ಸಂಸಾರದಲ್ಲಿ ಅನೇಕ ಕೆಲಸ ಕಾರ್ಯಗಳ ನಡುವೆಯೂ ಸ್ವಲ್ಪ ಸಮಯ ಮಾಡಿಕೊಂಡು ಸಾಧನೆ ಮಾಡಬೇಕು.

❁ ಮನಸ್ಸೆಂಬುದು ಮದಿಸಿದ ಆನೆಯಂತೆ. ಗಾಳಿ ಬಂದ ಕಡೆಗೆ ಅದು ಧಾವಿಸಿ ನುಗ್ಗುತ್ತದೆ. ಆದ್ದರಿಂದ ಸತ್‌ಅಸತ್ ಇವುಗಳ ವಿಚಾರ ಮಾಡಿ ಎಲ್ಲವನ್ನೂ ತಿಳಿದುಕೊಳ್ಳಬೇಕು. ಭಗವಂತನಿಗೋಸ್ಕರ ಕಠಿಣ ಸಾಧನೆ ಮಾಡಬೇಕು.


ಶ್ರೀಶಾರದಾದೇವಿ ವಚನವೇದದಿಂದ



# ಅಪರೂಪದ ಯೋಗಿ – ಅಥಣಿ ಶಿವಯೋಗಿ

ಆಂಗ್ಲಮೂಲ: **ಪ್ರೊ. ಸದಾನಂದ ಕನವಳ್ಳಿ**

ಅನುವಾದ: **ಪ್ರೊ .ಕೆ.ಬಿ.ಪ್ರಭುಪ್ರಸಾದ್**



ಕಳೆದ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸೇವಾಕ್ಷೇತ್ರಗಳಲ್ಲಿ ದುಡಿದ ಮಹಾತ್ಮರೊಬ್ಬರ ಸಂಕ್ಷಿಪ್ತ ಜೀವನಚಿತ್ರ ಇಲ್ಲಿದೆ. ಲೇಖಕರು ಇಂಗ್ಲಿಷ್ ಪ್ರಾಧ್ಯಾಪಕರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದರು. 'Eminent Lingayats' ಎಂಬ ಗ್ರಂಥದಲ್ಲಿ ಅವರು ಬರೆದ ಲೇಖನದ ಅನುವಾದವಿದು.

**ಸ**ಪ್ತಗ್ರಾಮ ಮತ್ತು ಇಂಗಳಗಾವಿ ಅಕ್ಕಪಕ್ಕದ ಹಳ್ಳಿಗಳು.

''ಎಂಥಾ ಆಕಳುಗಳಿವು! ಹತ್ತಿರವೇ ಇರುವ ನಮ್ಮ ಹಳ್ಳಿಗೆ ಆಗಾಗ ಬಂದು ಓಡಾಡುತ್ತವೆ. ಸುತ್ತ ಇರುವ ನಮ್ಮ ಹೊಲಗಳಿಗೆ ನುಗ್ಗಿ ಫಸಲಿಗೆ ಬಂದ ಪೈರನ್ನು ಒಮ್ಮೆಯೂ ಮೇಯುವುದಿಲ್ಲ'' ಎಂದು ಸಪ್ತಗ್ರಾಮದ ಜನ ಆಶ್ಚರ್ಯಪಡುತ್ತ ಮಾತಾಡಿಕೊಳ್ಳುತ್ತಿದ್ದರು. ಹಸುಗಳನ್ನು ಗುರುತು ಹಿಡಿದವರು ಯಾರೋ ಹೇಳಿದರು, ಅವು ''ಭಾಗೋಜಿ ಮಠದ ಅಯ್ಯನವರ ಹಸುಗಳು.'' ಅಯ್ಯನವರು ಬಹಳ ಬಡವರಾದರೂ ಬಹಳ ನೀತಿವಂತರು. ಪರಧನಕ್ಕಾಗಲಿ ಪರ ವಸ್ತುವಿಗಾಗಲಿ ಎಂದೂ ಆಶಿಸುವವರಲ್ಲ. ಬಸವಣ್ಣನವರ ವಚನಗಳಲ್ಲಿರುವ ಧರ್ಮವನ್ನು ಚಾ–ಚೂ ತಪ್ಪದೆ ಪಾಲಿಸುತ್ತಾರೆ. ಅವರ ಬುದ್ಧಿ–ಗುಣಗಳೇ ಅವರ ದನಕ್ಕೂ ಬಂದಿವೆ. ಹಿರಿಯನಿದ್ದ ಹಾಗೆ ಮನೆಯವರೆಲ್ಲ ಇರುವುದನ್ನು ಲೋಕದಲ್ಲಿ ಕಾಣುತ್ತೇವೆ. ಆದರೆ ಅಂಥ ಮನೆಯ ಪ್ರಾಣಿಗಳೂ ಸಹ ಅವರಂತೇ ಗುಣಶಾಲಿಗಳಾಗಿರುವುದು ವಿಶೇಷವೆ!

ಭಾಗೋಜಿ ಮಠದ ಅಯ್ಯನವರ ಸದ್ಭಕ್ತಿ–ಸದಾಚಾರಗಳನ್ನು ಮೆಚ್ಚಿಕೊಂಡ ಹಳ್ಳಿಯ ಪಟೇಲರು, ಅಯ್ಯನವರ ಸಂಸಾರ ಅನ್ನಬಟ್ಟೆಗಳಿಗೆ ಪರದಾಡದೆ ಸುಖವಾಗಿರಲೆಂದು ೨೦ ಎಕರೆ ಜಮೀನನ್ನು ಇನಾಮಾಗಿ ಕೊಡಲು ಮುಂದೆ ಬಂದರು. ದಾನ ಎಂದರೆ ನಿರಾಕರಿಸಬಹುದೆಂದು ಇನಾಮಾಗಿ ಕೊಡಬಯಸಿದರು. ಅಯ್ಯನವರು ತೆಗೆದುಕೊಳ್ಳಲಿಲ್ಲ. ಎಷ್ಟು ಅನುನಯದಿಂದ ಕೇಳಿಕೊಂಡರೂ, ಒತ್ತಾಯ ಮಾಡಿದರೂ, ಖಡಾಖಂಡಿತವಾಗಿ ನಿರಾಕರಿಸಿದರು. ಆಗ ಪಟೇಲರು ಒಂದು ಉಪಾಯ ಮಾಡಿದರು. ತಮ್ಮ ಆಳುಗಳಿಂದಲೆ ಆ ಜಮೀನನ್ನು ಉತ್ತು–ಬಿತ್ತಿ ಮಾಡಿಸಿ ಕಡಲೆಯ ಬೆಳೆ ತೆಗೆದರು. ತ್ರಿಗುಣ ಪ್ರಮಾಣದಲ್ಲಿ ಫಸಲು ಬಂತು. ೨೦ ಮೂಟೆ ಕಡಲೆ ಆದವು. ಆ ಎಲ್ಲ ಕಾಳನ್ನೂ ಮೂಟೆಗಳಲ್ಲಿ ತುಂಬಿಸಿ ಮಠಕ್ಕೆ ಕಳುಹಿಸಿದರು. ಮನೆಯೆಲ್ಲ ತುಂಬಿದ ಮೂಟೆಗಳಿಂದ ಅಯ್ಯನವರು ಒಂದು ಕಾಳನ್ನೂ ಮುಟ್ಟಲಿಲ್ಲ.

ಕಂದಾಯ ಕಟ್ಟಿಲ್ಲ, ಭಾರಿ ಪ್ರಮಾಣದ ಬಾಕಿ ಉಳಿಸಿಕೊಂಡಿದ್ದಾಳೆ ಎಂದು ಆ ಹಳ್ಳಿಯ ವಿಧವೆಯೊಬ್ಬಳಿಗೆ ಶಿಕ್ಷೆ ವಿಧಿಸಲಾಯಿತು. ತಲೆಯ ಮೇಲೆ ಭಾರವಾದ ಚಪ್ಪಡಿ ಕಲ್ಲನ್ನು ಹೊತ್ತು ಇಡೀ ದಿನ ಬಿಸಿಲಲ್ಲಿ ನಿಲ್ಲುವ ಶಿಕ್ಷೆ ನೋಡಿ ಭಾಗೋಜಿ ಮಠದ ಅಯ್ಯನವರ ಕರುಳು ಹಿಂಡಿದಂತಾಯಿತು. ಮನೆಯಲ್ಲಿ ಗೌಡರು ತುಂಬಿದ್ದ ೨೦ ಮೂಟೆ ಕಡಲೆಯನ್ನು ಆ ವಿಧವೆ ಹೆಣ್ಣುಮಗಳಿಗೆ ಕೊಟ್ಟು, ''ಕಂದಾಯದ ಬಾಕಿ ತೀರಿಸವ್ವಾ'' ಎಂದು ಹೇಳಿದರು. ಅಯ್ಯನೋರ ಮನೆಯವರೆಲ್ಲರೂ ದನಿಗೂಡಿಸಿದರು. ವಿಧವೆ ಹಾಗೆ ಮಾಡಿದ ಮೇಲೆ ಶಿಕ್ಷೆಯಿಂದ ಬಿಡುಗಡೆಯಾಯಿತು.

ಇಂಥಾ ಕುಟುಂಬ ಅಯ್ಯನವರದು. ಈ ಸದ್ಗುಣದ ಪುಣ್ಯವೋ ಎಂಬಂತೆ ಅವರಿಗೊಂದು ಗಂಡು ಮಗು ಆಯಿತು. ಅದು ಮೂರನೆಯದು. ಕ್ರಿ.ಶ. ೧೮೭೬ ವೈಶಾಖ ಶುದ್ಧ ೧೧ನೆ ಶುಭದಿನ, ಧಾರ್ಮಿಕ ಪದ್ಧತಿಯಂತೆ ಮಗುವಿಗೆ ಲಿಂಗಧಾರಣೆ ಮಾಡಿ 'ಗುರುಲಿಂಗ' ಎಂದು ನಾಮಕರಣ ಮಾಡಿದರು. ಶರಣ ಧರ್ಮದ ಮೂರು ಶ್ರೇಷ್ಠ ತತ್ತ್ವಗಳಾದ ಗುರು–ಲಿಂಗ–ಜಂಗಮ ಮಗುವಿನಲ್ಲಿ ಮೈಗೂಡಿ ಅವನೊಬ್ಬ ಶ್ರೇಷ್ಠ ಜಂಗಮನಾಗಿ ಬೆಳೆಯಲು ಸೂಚಕವಾಯಿತು.

ಮಗು ಬೆಳೆಯುತ್ತ ಪ್ರೀತಿಯೇ ರೂಪುಗೊಂಡಂತೆ ಮನೆಯೊಳಗೆ ಊರೊಳಗೆ, ಶಾಲೆಯೊಳಗೆ ಬಂಧು–ಮಿತ್ರರು ಮಾತ್ರವಲ್ಲ ಎಲ್ಲ

ರೊಂದಿಗೆ ಪ್ರೀತಿಯಿಂದ ಒಂದುಗೂಡಿ ನಿಸ್ಸಂಕೋಚವಾಗಿ ಎಲ್ಲರವನಾಗಿ ಒಡನಾಡಿದ. ಅವನ ಕಣ್ಣುಗಳಲ್ಲಿ ಏನೋ ಬೆಳಕು! ನೋಡಿದರೆ ಬರಿ ಜಗತ್ತನ್ನಷ್ಟೇ ಅಲ್ಲ, ದೂರದ ಯಾವುದೊ ಅತೀತವನ್ನೇ ಕಾಣುತ್ತಿರುವಂತೆ ಹೊಳಪು. ಧ್ಯಾನಸ್ಥನಾಗಿದ್ದು ಭಾವಮುಖನಾಗಿ ತೆರೆದಂತೆ ಕಣ್ಣು. ಇದನ್ನೆಲ್ಲ ಗಮನಿಸಿದ ತಂದೆಗನಿಸಿತು, ಈತ ಸಾಮಾನ್ಯನಲ್ಲ, ಸಾಂಸಾರಿಕ ಬದುಕಿಗೆ ಒಗ್ಗುವವನಲ್ಲ, ಎಂದು. ಮಗುವಿನ ತಾಯಿಯಾದ ನೀಲಮ್ಮನಿಗೆ ಇದನ್ನು ಮನವರಿಕೆ ಮಾಡಿಕೊಡುವುದಷ್ಟು ಸುಲಭವಾಗಿಲಿಲ್ಲ. ಈತ ಲೋಕಕ್ಕೇ ಸೇರಿದವನು, ಮನೆಗೆ ಕುಟುಂಬಕ್ಕೆ ಸೀಮಿತವಾದವನಲ್ಲ.

ಹೆತ್ತವರಿಬ್ಬರೂ ಈ ಬಗ್ಗೆ ಮಾತಾಡಿಕೊಂಡು ಒಂದು ಸಮಾಧಾನಕ್ಕೆ ಬಂದರು. ಇಬ್ಬರೂ, ಮೋಟಗಿ ಮಠದ ಗುರುಗಳಾದ ಮುರುಘೇಂದ್ರ ಸ್ವಾಮಿಗಳ ಬಳಿಗೆ ಹೋಗಿ ಈ ವಿಷಯವನ್ನು ತಿಳಿಸಿದರು. ಈ ಮಗ (ಗುರುಲಿಂಗ) ಅಥಣಿಯ ಗಚ್ಚಿನ ಮಠವನ್ನು ಬೆಳಗಿಸುವ ದೀಪವಾಗುತ್ತಾನೆ ಎಂದು ಆ ಅಪ್ಪನವರಿಗನಿಸಿತು. ಗುರುಲಿಂಗಯ್ಯನನ್ನು ಸ್ವೀಕರಿಸಿ ''ಮುರುಘದೇವ'' ಎಂದು ಮರುನಾಮಕರಣ ಮಾಡಿದರು.

ಗಚ್ಚಿನ ಮಠದ ಧಾರ್ಮಿಕ ಪರಂಪರೆ ೪೦೦ ವರ್ಷದ್ದು. ತೆಲಸಾಂಗದ ಗುರುಶಾಂತ ಸ್ವಾಮಿಗಳಲ್ಲಿ ಬಾಲಕನನ್ನು ತರಬೇತಿಗೆಂದು ಬಿಟ್ಟರು. ಗುರುಶಾಂತ ಸ್ವಾಮಿಗಳು ಆಗ ಚರ್ಮರೋಗಗ್ರಸ್ತರಾಗಿದ್ದರು. ಕಿರಿಯ ಬಾಲಕ ಭಕ್ತಿಯಿಂದ ಅವರ ಸೇವೆ-ಶುಶ್ರೂಷೆ ಮಾಡಿದ. ಊಟ ಮಾಡಿಸುವುದು, ಒಸರುವ ಗಾಯಗಳನ್ನು ಸ್ವಚ್ಛ ಮಾಡಿ ಮುಲಾಮನ್ನು ಸವರುವುದು ಇತ್ಯಾದಿ. ಗುರುಗಳೋ, ಚಿಕ್ಕ ಹುಡುಗ ಇದನ್ನೆಲ್ಲ ಮಾಡುವುದು ಬೇಡ ಎಂದು ಎಷ್ಟು ಹೇಳಿದರೂ ಮುರುಘೇಶ ಬಿಡಲಿಲ್ಲ. ಗುರುವಿನ ವಾತ್ಸಲ್ಯ ಉಕ್ಕಿ ಹರಿಯುವಂತೆ ಸೇವೆ ಮಾಡುತ್ತಲೆ, ಶರಣತತ್ತ್ವ-ಆಗಮಾದಿ ಶಾಸ್ತ್ರಗಳನ್ನು ಕೇಳುತ್ತ ಕಲಿತ. ಮೂರು ಹೊತ್ತು ಭಕ್ತಿಯಿಂದ ತದೇಕ ಚಿತ್ತದಿಂದ ಇಷ್ಟಲಿಂಗ ಪೂಜೆ ಮಾಡಿದ. ಷಟ್ಸ್ಥಲ ಸೋಪಾನವೇರಿ ಶಿವಯೋಗಿಯಾದ. 'ಮುರುಘೇಂದ್ರ ಶಿವಯೋಗಿ' ಎಂದು ಎಲ್ಲರೂ ಅವನಿಗೆ ತಲೆಬಾಗಿ ಗೌರವಿಸತೊಡಗಿದರು.

ಭಕ್ತಾದಿಗಳೆಲ್ಲ ಸೇರಿ ಆತನನ್ನು ಗಚ್ಚಿನ ಮಠದ ಗುರುಪೀಠದಲ್ಲಿ ಕೂರಿಸಿ ಪಟ್ಟ ಕಟ್ಟಬೇಕೆಂದು ತೀರ್ಮಾನಿಸಿದರು. ಆದರೆ ಮುರುಘೇಂದ್ರರು ಯಾವ ಬಂಧನಕ್ಕೂ ಸಿಲುಕಲು ಇಷ್ಟಪಡಲಿಲ್ಲ. ಜನರು, ಭಕ್ತರೆಲ್ಲ ಸೇರಿ ಅನುನಯದಿಂದ ಬೇಡಿದರು. ಅದೊಂದು ಬಂಧನ, ತಮಗದು ಬೇಡ ಎಂದು ಖಡಾಖಂಡಿತವಾಗಿ ನಿರಾಕರಿಸಿದರು.

ಎಷ್ಟೇ ದೂರ, ಮರೆಯಲ್ಲಿರಲು ಪ್ರಯತ್ನಿಸಿದರೂ ಹಲವಾರು ಘಟನೆಗಳು ನಡೆದು ಅವರ ಮಹಾತ್ಮೆಯನ್ನು ಬಹಿರಂಗಗೊಳಿಸಿ ಸಾರಿದವು. ಒಂದು ಸಲ ಶಿವಪ್ಪಶಾಸ್ತ್ರಿ ಎಂಬ ಮಹಾವಿದ್ವಾಂಸ ಗ್ರಂಥಗಳ ಕಟ್ಟನ್ನು ಹೊತ್ತು ಮಠಕ್ಕೆ ಬಂದ. ತನ್ನ ಪಾಂಡಿತ್ಯದ ಬಗ್ಗೆ, ತಾನು ಬರೆದ ಗ್ರಂಥಗಳ ಬಗ್ಗೆ ಜನ ನಿಬ್ಬೆರಗಾಗುವಂತೆ ಮಾತಾಡಿ ಹೇಳಿಕೊಂಡ. ಶಿವಯೋಗಿಗಳು ಶಾಂತವಾಗಿ ಎಲ್ಲವನ್ನೂ ಕೇಳಿದರು. ಏನೊಂದು ಮಾತನ್ನೂ ಆಡಲಿಲ್ಲ. ಶಹಬಾಸ್ ಎಂದು ಮೆಚ್ಚುಗೆಯ ಉದ್ಗಾರವನ್ನೂ ತೆಗೆಯಲಿಲ್ಲ. ಕಡೆಗಣಿಸಿ ಟೀಕೆಯನ್ನೂ ಮಾಡಲಿಲ್ಲ. ಇದೆಲ್ಲ ಕೇವಲ ಪಾಂಡಿತ್ಯ ಪ್ರದರ್ಶನ ಎಂದು ಅವರಿಗೆ ತಿಳಿದಿತ್ತು. ಕಡೆಯಲ್ಲಿ ನಿರ್ಭಾವದಿಂದ, ''ಬಸವಣ್ಣನವರ ವಚನಗಳೇ ನಮಗೆ ಸಾಕು. ಈ ಗ್ರಂಥಗಳು ನಮಗೇಕೆ?'' ಎಂದುಬಿಟ್ಟರು.

ಶಿವಯೋಗಿಗಳ ಕಾಳಜಿ ಇದ್ದುದೆಲ್ಲ ಬಹುವಾಗಿ ಕಷ್ಟಕಾರ್ಪಣ್ಯಗಳಿಂದ ಬಳಲಿ ಬೆಂಡಾದ ಭಕ್ತರ ಬಗ್ಗೆ. ಭಕ್ತರ ಮನೆಗೆ ಬಿನ್ನಕ್ಕೆ, ಪಾದಪೂಜೆಗೆ ಕರೆದಾಗ ಹೋಗುತ್ತಿದ್ದುದು ನೆಪ. ನಿಜವಾದ ಉದ್ದೇಶ ಅವರ ಕಷ್ಟಗಳನ್ನು ದೂರಮಾಡಲು, ಸಮಸ್ಯೆಗಳನ್ನು ಬಗೆ ಹರಿಸಲು.

ಮಹಾಲಿಂಗಪುರದ ಮನ್ನಯ್ಯನ ಮನೆ, ಬ್ರಹ್ಮಪಿಶಾಚಿ ಕಾಟಕ್ಕೆ ಒಳಗಾಗಿ ಏನು ಮಾಡುವುದೆಂದು ತೋಚದಾಯಿತು. ಮನ್ನಯ್ಯ ಅಥಣಿಗೆ ಬಂದು ತನ್ನ ಕಷ್ಟವನ್ನು ಶಿವಯೋಗಿಗಳಲ್ಲಿ ಹೇಳಿಕೊಂಡು, ''ನಮ್ಮನ್ನು ಕಾಪಾಡಿ ಗುರುವೇ'' ಎಂದು ಪರಿಪರಿಯಾಗಿ ಬೇಡಿದ. ಶಿವಯೋಗಿಗಳು ಕೇಳಿ ನಕ್ಕುಬಿಟ್ಟರು. ''ಅದೆಲ್ಲ ನಿಮ್ಮ ಭಯದಿಂದ ಉಂಟಾದ ಭ್ರಮೆ'' ಎಂದು ಶಾಂತವಾಗಿ ತಿಳಿಯಹೇಳಿದರು. ಮನ್ನಯ್ಯನ ಕೋರಿಕೆಯಂತೆ ಅವರ ಮನೆಗೆ ಹೋಗಿ ಕೆಲವು ದಿನಗಳು ಅಲ್ಲಿಯೆ ಇದ್ದರು. ನಿತ್ಯ ತ್ರಿಕಾಲ ಶಿವ(ಲಿಂಗ)ಪೂಜೆ ಆಗುತ್ತಿತ್ತು. ಶಿವಯೋಗಿಗಳು, ಮಹಿಮಾವಂತ ಗುರುಗಳು ಬಂದಿದ್ದಾರೆ. ಮನ್ನಯ್ಯನ ಮನೆಯಲ್ಲಿ ಮೊಕ್ಕಾಂ ಮಾಡಿದಾರೆ ಎಂದು ಕೇಳಿ ಸುತ್ತಮುತ್ತಲ ಹಳ್ಳಿಗಳಿಂದ ಭಕ್ತಾದಿಗಳು ಗುರುಗಳ ದರ್ಶನ ಮಾಡಲು, ನಮಸ್ಕರಿಸಲು ಬಂದು ಹೋಗುತ್ತ, ಮನ್ನಯ್ಯನ ಮನೆ ಯಾತ್ರಾಸ್ಥಳವಾಯಿತು. ಮನೆಯೆಲ್ಲ ಶಿವಪಂಚಾಕ್ಷರಿಯ ನಾಮದಿಂದ ತರಂಗಿತವಾಯಿತು. ಧೂಪದೀಪಗಳಿಂದ ವಾತಾವರಣವೆಲ್ಲ ಶಿವಮಯವಾಯಿತು. ಪಿಶಾಚಿಯೂ ಇಲ್ಲ , ಅದರ ಕಾಟವೂ ಇಲ್ಲ. ಹೀಗೆ ಉಪಾಯವಾಗಿ ಶಿವಯೋಗಿಗಳು ಮನ್ನಯ್ಯನ ಮತ್ತು ಮನೆಯವರ ಮನಸ್ಸಿನ ಭಯವನ್ನು ಪೂರ್ತಿ ಹೋಗಲಾಡಿಸಿದರು. ಬ್ರಹ್ಮಪಿಶಾಚಿ ಓಡಿಹೋಯಿತು ಎಂದು ಜನ ಭಾವಿಸಿದರೆ, ನಿಜವಾಗಿ ಮೂಲೋತ್ಪಟನವಾದುದು ಅವರ ಮೂಢನಂಬಿಕೆ.

ಮಠದ ಸುತ್ತಲ ತೋಟದಲ್ಲಿ ಮೋಸಂಬಿ ಹಣ್ಣಿನ ಮರಗಳಿದ್ದವು. ಒಂದು ದಿನ ಒಬ್ಬ ಹುಡುಗ ತೋಟದೊಳಕ್ಕೆ ಬಂದು ಯಾವುದೋ ಒಂದು ಮರದ ಹಣ್ಣುಗಳನ್ನು ಆತುರಾತುರವಾಗಿ ಕಿತ್ತುಕೊಂಡು ಓಡಿಹೋದ. ಇದನ್ನು ಗಮನಿಸಿದ ಶಿವಯೋಗಿಗಳು ಅವನ ಗುರುತು ಹಚ್ಚಿದ್ದರು. ಅವನಿಗೆ ಹೇಳಿಕಳಿಸಿದರು. ಹುಡುಗನಿಗೆ ದಿಗಿಲಾಯಿತು. ಬಂದು ನಡುಗುತ್ತ ನಿಂತ. 'ಚೆನ್ನಾಗಿ ಬೈದು ಶಿಕ್ಷಿಸಬಹುದು' ಎಂದುಕೊಂಡ. ಆದರೆ ಆತನಿಗೆ ಆಶ್ಚರ್ಯ ಕಾದಿತ್ತು. ಶಿವಯೋಗಿಗಳು ವಾತ್ಸಲ್ಯ ತುಂಬಿದ ಕಣ್ಣುಗಳಿಂದ ನೋಡುತ್ತ, ಮಂದಹಾಸ ಸೂಸಿ, ''ಆ ಮರದ ಹಣ್ಣು ಭಾಳ ಹುಳಿ ಇರತಾವ, ತಮ್ಮಾ. ತಗಾ ಸಕ್ಕರೇನ. ತೊಳೀಗೆ ಹಚ್ಚಿಕೊಂಡು ತಿನ್ನು, ರುಚಿಯಾಗ್ತದೆ'' ಎನ್ನಬೇಕೆ! ಹುಡುಗನಿಗೆ ಬಹಳ ಖುಷಿ ಆಯಿತು. ಸಕ್ಕರೆಯನ್ನು ತೆಗೆದುಕೊಂಡು ಕಾಲಿಗೆ ನಮಸ್ಕಾರ ಮಾಡಿ ಓಡಿದ.

ಕರ್ನಾಟಕದ ಉತ್ತರ ಭಾಗದ ಶಿಕ್ಷಣಕ್ಷೇತ್ರದಲ್ಲಿ ಶಿರಸಂಗಿ ಲಿಂಗರಾಜರ ಹೆಸರು ಬಹುಪರಿಚಿತ. ಅವರು ಅಪಾರ ಶ್ರೀಮಂತರು. ಮಕ್ಕಳಿರಲಿಲ್ಲ. ಶಿವಯೋಗಿಗಳ ಬಗ್ಗೆ ಬಹಳ ಭಕ್ತಿ. ಒಂದು ಸಲ ಗುರುಗಳನ್ನು ನವಲಗುಂದಕ್ಕೆ ಬರಮಾಡಿಕೊಂಡರು. ಅರಟಾಳ ರುದ್ರಗೌಡರು ಡೆಪ್ಯೂಟಿ ಕಲೆಕ್ಟರು. ಲಿಂಗರಾಜರಿಗೆ ಆಪ್ತರಾಗಿದ್ದವರು. ಶಿವಯೋಗಿಗಳಲ್ಲಿ, ''ಗುರುಗಳೇ, ಶಿರಸಂಗಿ ಲಿಂಗರಾಜರು ತಮ್ಮೆಲ್ಲ ಆಸ್ತಿ,

ಸಂಪತ್ತುಗಳನ್ನು ತಮ್ಮ ಪಾದಕ್ಕೆ ಅರ್ಪಣ ಮಾಡಲು ಅಪೇಕ್ಷಿಸುತ್ತಾರೆ'' ಎಂದು ಅರಿಕೆ ಮಾಡಿಕೊಂಡರು. ಶಿವಯೋಗಿಗಳು, ''ಭಾಳ ದೊಡ್ಡ ಮನಸ್ಸು ಲಿಂಗರಾಜರದು. ಎಂಥಾ ಆಲೋಚನೆ ಬಂದಾದಲ್ಲಾ! ಆದರೆ ಈ ಸಂಪತ್ತನ್ನೆಲ್ಲ ತಗೊಂಡು ನಾವೇನು ಮಾಡೋದದ? ಮಠಕ್ಕಂತೂ ಆವಶ್ಯಕತೆ ಇಲ್ಲ. ಆಸ್ತಿಪಾಸ್ತಿ ಮಾಡೋದು ಮಠದ ಪರಂಪರಾ ಅಲ್ಲ. ನಮದೇನಿದ್ರೂ ಅಣ್ಣಾವರು ಹೇಳೂ ಕಾಯಕ ಮತ್ತು ದಾಸೋಹ ಅಷ್ಟೆ. ವಿರಕ್ತರು, ಮಠದ ಸ್ವಾಮಿಗಳು ಮಠಕ್ಕೆ ಆಸ್ತಿ-ಸಂಪತ್ತು ಅಂತ ಕೂಡಿಸಿಕೊಂಡು ಹೋಗೋದು ಅಂದರೆ ಲೌಕಿಕ ಮೋಹದೊಳಗೆ ಬಿದ್ಹಾಂಗ'' ಎಂದು ಸಾಫ ಸೀದಾ ಹೇಳೇಬಿಟ್ಟರು. ಲಿಂಗರಾಜರ ಮುಖ ಪೆಚ್ಚಾದುದನ್ನು ನೋಡಿ ಕರುಣೆಯಿಂದ ಮೃದುವಾಗಿ, ''ಯಾರಾದ್ರು ಹುಡುಗನ್ನ ದತ್ತಕ ಮಾಡಿಕೊಳ್ಳದೆ ಇದ್ದುದು ಭಾಳ ಛಲೋ ಆತು ನೋಡ್ರೆಪಾ. ಹಂಗೇನಾದ್ರೂ ಮಾಡಿಕೊಂಡಿದ್ದರ ಒಬ್ಬನೇ ಮಗ ಆಗ್ತಿದ್ದ. ಈಗ ಹೇಳತೀನಿ ಕೇಳ್ರಿ. ಜಗತ್ತಿನಾಗ ಇರೋ ಎಲ್ಲಾ ಮಕ್ಕಳೂ ನಿಮ್ಮ ಮಕ್ಕಳು ಅಂತ ಮಾಡಿಕೊಳ್ರಿ. ತಲೆತಲಾಂತರವಾಗಿ ನಿಮ್ಮ ಸಂಪತ್ತು ಸದ್ವಿನಿಯೋಗವಾಗ್ತಾ ನಿಮ್ಮ ಹೆಸರ ಉಳಿಸೋ ಮಕ್ಕಳಿರಬೇಕು ಅಂದ್ರ, ವಿದ್ಯೆ ಕಲಿಸೋದಕ್ಕಾಂತ ನಿಮ್ಮ ಸಂಪತ್ತನೆಲ್ಲ ಕೊಟ್ಟು ಬಿಡ್ರಿ. ಒಬ್ಬ ಹಸಿದವನಿಗೆ ಅನ್ನ ಹಾಕಿದ್ರ, ಆ ಒಂದಿನ ಅಷ್ಟೆ ಅವ ತೃಪ್ತಿಪಡ್ತಾನ. ಒಂದು ದಿನದ ಅನ್ನದ ಚಿಂತಿ ಬಗೆಹರಿತದ. ಅದೇ, ಅವನಿಗೆ ಸರಿಯಾದ ಶಿಕ್ಷಣ ನೀಡಿದ್ರ ಅವನು ಜೀವಮಾನವೆಲ್ಲ ಸುಖವಾಗಿರ್ತಾನ'' ಎಂದರು.

ಲಿಂಗರಾಜರಿಗೆ ಈ ಮಾತು ಹಿಡಿಸಿತು. ಅವರ ಸಂಪತ್ತಿನಿಂದ ಹುಟ್ಟುಹಾಕಿದ ಕೆ.ಎಲ್.ಇ ಸೊಸೈಟಿ ಈಗ ಹೆಮ್ಮರವಾಗಿ ಉತ್ತರ ಕರ್ನಾಟಕದ ಪ್ರಾಂತದಲ್ಲಿ ನಾನಾ ಶಿಕ್ಷಣ ಶಾಖೆಗಳನ್ನು ಹೊಂದಿದೆ. ಅದರ ರೆಂಬೆ ದೆಹಲಿಯವರೆಗೂ ಚಾಚಿದೆ.

ಇದೇ ರೀತಿ ಶಿವಯೋಗಿಗಳ ಬುದ್ಧಿವಾದದಂತೆ ಸೊಲ್ಲಾಪುರದ ವಾರದ ಮಲ್ಲಪ್ಪನವರು ತಮ್ಮ ಆಸ್ತಿಯಿಂದ ಸಂಸ್ಕೃತ ಪಾಠಶಾಲೆಯನ್ನು ತೆರೆದರು. ಸದಾ ಸಮಾಜದ ಹಿತವನ್ನೇ ಶಿವಯೋಗಿಗಳು ಬಯಸುತ್ತಿದ್ದರು.

ದಾವಣಗೆರೆಯ ಮೃತ್ಯುಂಜಯ ಸ್ವಾಮಿಗಳು ವಿದ್ಯಾಭ್ಯಾಸಕ್ಕೆಂದು ಕಾಶಿಗೆ ಹೊರಡಬೇಕೆಂದಿದ್ದರು. ಅಂಕಲಗಿ ಸ್ವಾಮಿಗಳು, ''ಕಾಶಿಗೆ ಯಾಕೆ, ಅಥಣಿಗೆ ಹೋಗು. ಒಳ್ಳೆಯ ಶಿಕ್ಷಣದ ಜೊತೆಗೆ ಪುಣ್ಯ ಎರಡೂ ಸಿಕ್ಕುತ್ತವೆ'' ಎಂದರು. ಮೃತ್ಯುಂಜಯಪ್ಪ ಅಥಣಿಗೆ ಹೋದರು. ಅವರ ಜೀವನದಲ್ಲಿ ಅದು ಮಹತ್ವದ ತಿರುವು! ಅಥಣಿಯಲ್ಲಿ ಶಿವಯೋಗಿಗಳ ಕೋಣೆಯನ್ನು ಗುಡಿಸಿ ಸ್ವಚ್ಛಗೊಳಿಸುವ ಕೆಲಸವನ್ನು ಮಾಡತೊಡಗಿದರು. ಶಿವಯೋಗಿಗಳು ತಮ್ಮ ಕೆಲಸಗಳೆಲ್ಲವನ್ನೂ ತಾವೇ ಮಾಡಿಕೊಳ್ಳುತ್ತಿದ್ದರು. ಬೇರೆ ಯಾರಿಂದಲೂ ಸೇವೆ ಮಾಡಿಸಿಕೊಳ್ಳುತ್ತಿರಲಿಲ್ಲ. ಶಿವಯೋಗಿಗಳ ಕೋಪಕ್ಕೆ ಹೆದರಿ ಯಾರೂ ಆ ಧೈರ್ಯ ಮಾಡುತ್ತಿರಲಿಲ್ಲ.

ಶಿವಯೋಗಿಗಳು ಉಷಃಕಾಲದಲ್ಲೇ ಹೊರಗೆ ತಿರುಗಾಡಿ ಬರುವುದು ಪದ್ಧತಿ. ಅವರು ಹಾಗೆ ಹೋದಮೇಲೆ, ಮೃತ್ಯುಂಜಯ ಅವರ ಕೊಠಡಿಯನ್ನು ಸ್ವಚ್ಛಗೊಳಿಸಿ, ಎಲ್ಲ ವಸ್ತುಗಳನ್ನೂ ಓರಣವಾಗಿಡುತ್ತಿದ್ದ. ಶಿವಯೋಗಿಗಳು ಹಿಂತಿರುಗುವ ಹೊತ್ತಿಗೆ ಎಲ್ಲ ಕೆಲಸ ಮುಗಿದಿರುತ್ತಿತ್ತು. ಶಿವಯೋಗಿಗಳಿಗೆ ಆಶ್ಚರ್ಯ, ಇದೆಲ್ಲ ಯಾರ ಕೆಲಸ ಎಂದು. ಪತ್ತೆ ಮಾಡಲು ಒಂದು ಮುಂಜಾವು ಶಿವಯೋಗಿಗಳು ಬೇಗ ಹಿಂತಿರುಗಿದರು. ಪೊರಕೆಯನ್ನು ಕೈಗೆತ್ತಿಕೊಳ್ಳುತ್ತಿದ್ದ ಮೃತ್ಯುಂಜಯ ಸಿಕ್ಕುಬಿದ್ದ, ಇದ್ದಕ್ಕಿದ್ದಂತೆ ಎದುರಾದ ಶಿವಯೋಗಿಸ್ವಾಮಿಗಳನ್ನು ನೋಡಿ ಭಯಗೊಂಡು ನಿಂತ. ಸ್ವಾಮಿಗಳು ನಸುನಗುತ್ತ, ''ತಗೊ ತಗೋ, ಕಸಹೊಡಿ'' ಎಂದರು. ಇದುವೇ ಗುರುಗಳು ಮೃತ್ಯುಂಜಯನಿಗಿತ್ತ ದೀಕ್ಷೆಯಾಯಿತು, ಸಮಾಜದ ಶುದ್ಧೀಕರಣದ ಮುಂದಿನ ಮಹತ್ಕಾರ್ಯಕ್ಕೆ. ಹೀಗೆ ಒಂದೊಂದಾಗಿ ಎಲ್ಲ ಶಿಕ್ಷಣ, ತರಬೇತಿ ದೊರೆತ ಮೃತ್ಯುಂಜಯ ಮುಂದೆ ಧಾರವಾಡದ ಮುರುಘಾಮಠದ ಮುಖ್ಯಗುರುಗಳಾಗಿ ಅಕ್ಷರ ಹಾಗೂ ಅನ್ನ ದಾಸೋಹಗಳ ಮೂಲಕ ವ್ಯಕ್ತಿಯ ಮತ್ತು ಸಮಾಜದ ಶಿಕ್ಷಣ ಕಾರ್ಯವನ್ನು ಮಾಡಿ ಮಾದರಿಯಾದರು. ಧಾರವಾಡದ ಮಠದಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನಾರಂಭಿಸಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಊಟ-ವಸತಿ ದೊರೆತವು. ಅವರೆಲ್ಲ ಬೇರೆ ಬೇರೆ ಸ್ಕೂಲು ಕಾಲೇಜುಗಳಲ್ಲಿ ಓದಿ ಉತ್ತಮೋತ್ತಮ ಪದವಿಗಳನ್ನು ಪಡೆದು, ವೈಸ್‌ಛಾನ್ಸಲರ್ ಡಿ.ಸಿ. ಪಾವಟೆಯವರಂತೆ, ದೊಡ್ಡ ದೊಡ್ಡ ಹುದ್ದೆಗಳಿಗೇರಿದರು.

೧೯೧೯ರಲ್ಲಿ ಗಚ್ಚಿನ ಮಠದಲ್ಲಿ ದೊಡ್ಡ ಉತ್ಸವ. ಅರುವತ್ತ ಮೂರು ಪುರಾತನರ ಪೂಜೆ. ನಾನಾ ಕಡೆಯ ಭಕ್ತಾದಿಗಳಿಂದ ಈ ಉತ್ಸವಕ್ಕೆ ದವಸ-ಧಾನ್ಯ, ವಸ್ತು ಒಡವೆ, ಹಣ ರಾಶಿ ರಾಶಿ ಹರಿದು ಬಂದವು. ಉತ್ಸವವೆಲ್ಲ ಮುಗಿದು ಖರ್ಚಾಗಿ ಮಿಕ್ಕಿದ ಹಣ ಎರಡು ಮೂರು ಮೂಟೆಗಳು ತುಂಬಿದಷ್ಟು ಬೆಳ್ಳಿನಾಣ್ಯಗಳನ್ನು ಮಠಕ್ಕೆ ತೆಗೆದುಕೊಳ್ಳಬಹುದೆಂದು ಬಿಲ್ಲೂರ ಸ್ವಾಮಿಗಳು ಅಭಿಪ್ರಾಯ ಪಟ್ಟರು. ಆ ಮಾತಿಗೆ ಶಿವಯೋಗಿಗಳು ತಡೆ ಹಾಕಿದರು. ''ಯಾರ ದುಡ್ಡು? ಯಾರಿಗೆ ಕೊಡಲು ಹೊರಟಿದ್ದೀರಿ? ತಿಳಕೊಳ್ಳಿರಿ. ಇದೆಲ್ಲ ಶಿವನ ದುಡ್ಡು. ಉಳಿದುದೆಲ್ಲ ಶಿವನಿಗೇ ಸೇರಬೇಕು, ತಿಳೀತಿಲ್ಲೊ. ಹೊರಗ ಭಿಕ್ಷಾಬೇಡುವವರು ಸಾಲು ಹಿಡಿದು ಕೂತಾರ. ಈ ದುಡ್ಡನ್ನೆಲ್ಲ ತಗೊಂಡು ಹೋಗಿ ಅವರೆಲ್ಲರಿಗೂ ಹಂಚಿಬಿಡ್ರಿ'' ಎಂದು ಹೇಳಿಬಿಟ್ಟರು. ಅಪ್ಪಾವರ ಆಜ್ಞೆ! ಪ್ರತಿ ನುಡಿಯದೆ ಅಷ್ಟು ಹಣವನ್ನೂ ಮಠದ ಹೊರಗೆ ನೆರೆದ ಭಿಕ್ಷುಕರಲ್ಲರಿಗೂ ಹಂಚಿ ಬಂದರು. ಪ್ರತಿಯೊಬ್ಬರಿಗೂ ಕೈತುಂಬಾ ರೊಕ್ಕ ಸಿಕ್ಕವು.

ಇನ್ನೊಂದು ಸಂಗತಿ ನಡೆಯಿತು. ಮಠದ ಪಡಸಾಲೆಯ ಗೋಡೆಯ ಮೇಲೆಲ್ಲ ಯಾರೋ ಭಕ್ತರು ನಾಣ್ಯಗಳನ್ನು ಮೊಳೆ ಹೊಡೆದು ಕೂರಿಸಿದ್ದರು. ಒಂದು ದಿನ ಯಾರೋ ಅವುಗಳನ್ನೆಲ್ಲ ಕಿತ್ತು, ಕದ್ದುಕೊಂಡು ಹೋದರು. ಮಠದ ನೌಕರ ಅದನ್ನು ಶಿವಯೋಗಿಗಳಿಗೆ ತಿಳಿಸಿದ. ಕಳವು ಮಾಡಿದವರನ್ನು ಪತ್ತೆಮಾಡಿ ಶಿಕ್ಷಿಸಿದರೆ ಸರಿಹೋಗುತ್ತೆ ಅಂದ. ಶಿವಯೋಗಿಗಳೋ ಶಾಂತಚಿತ್ತರಾಗಿ, ''ಅದಕ್ಯಾಕೆ ಚಿಂತಿ ಮಾಡ್ತೀರಪ್ಪಾ ಯಾರೋ ಶ್ರೀಮಂತ ಆ ನಾಣ್ಯಗಳನ್ನು ಮೊಳೆ ಹೊಡೆದು ಅಲಂಕಾರ ಮಾಡಿದ. ಯಾರಿಗೆ ಆ ದುಡ್ಡಿನ ಅಗತ್ಯ ಇತ್ತೋ ಅವರು ತಗೊಂಡು ಹೋಗ್ಯಾರ. ಶಿವನ ದುಡ್ಡು ಶಿವನಿಗೆ ಸಂದಾಯವಾಯಿತು ಬಿಡು'' ಎಂದರು.

ಇಂಥದೇ ಒಂದು ಪ್ರಸಂಗ ಬಸವಣ್ಣನವರ ಮಹಾಮನೆಯಲ್ಲೂ ನಡೆದುದು ಇಲ್ಲಿ ನೆನಪಿಗೆ ಬರುತ್ತದೆ. ಕಳ್ಳನೊಬ್ಬ ಮಧ್ಯ